**ಪಿ.ಡಬ್ಲ್ಯು-01 – ಅಮ್ಮಣಮ್ಮ**

**ಸಾಕ್ಷಿಯನ್ನು ದಿನಾಂಕಃ 23.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ / ಹೆಚ್ಚುವರಿ ಸಾಕ್ಷ್ಯ ವಾದಿ ಪರ ಶ್ರೀ. ಜಿ.ಎನ್.ಎನ್. / ಶ್ರೀ. ಹೆಚ್.ಎಸ್.ಡಿ. ವಕೀಲರಿಂದಃ**

ನನ್ನ ಮಧ್ಯಂತರ ಅರ್ಜಿಯ ಜೊತೆ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನನ್ನ ಗಂಡನಾದ ಹುಚ್ಚನಾಯಕರವರ ಮರಣ ಪ್ರಮಾಣ ಪತ್ರವನ್ನು ಅದನ್ನು **ನಿ.ಪಿ.–25** ಎಂದು, ನನ್ನ ಗಂಡನ ಆಧಾರ್ ಕಾರ್ಡ್ ಅನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.–26** ಎಂದು, ನಮ್ಮ ಕುಟುಂಬದ ಪಡಿತರ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.–27** ಎಂದು ಮತ್ತು 02 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಪಿ.–28 ಮತ್ತು ನಿ.ಪಿ.–29** ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟಿ ಸವಾಲು: ಪ್ರತಿವಾದಿ ಪರ ಶ್ರೀ. ಎನ್.ಆರ್.ಎನ್. ವಕೀಲರಿಂದಃ**

ನಿ.ಪಿ.–26 ಹಾಗು ನಿ.ಪಿ.–27 ಅನ್ನು ನನ್ನ ಗಂಡ ಬದುಕಿರುವಾಗಲೇ ಮಾಡಿಸಿರುತ್ತೇವೆ. ನಿ.ಪಿ.–25 ರಿಂದ ನಿ.ಪಿ.–27 ದಾಖಲೆಗಳು ಈ ದಾವೆಯನ್ನು ಹೂಡುವ ಸಮಯದಲ್ಲಿ ನನ್ನ ಬಳಿ ಇದ್ದಿರುತ್ತವೆ ಎಂದರೆ ಸರಿ. ನಿ.ಪಿ.–29 ರಂತೆ ಎಂ.ಆರ್.ಹೆಚ್.12/2017–2018 ರಂತೆ ನನ್ನ ಹಾಗು ನನ್ನ ಮಕ್ಕಳ ಹೆಸರಿಗೆ ಆದ ಖಾತೆಯ ಸಂಬಂಧ ಪ್ರತಿವಾದಿಗಳು ಹುಣಸೂರಿನ ಉಪ–ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಂಖ್ಯೆ 137/2021 ರಂತೆ ಮೇಲ್ಮನವಿ ಸಲ್ಲಿಸಿದ್ದು, ದಿನಾಂಕಃ 23.02.2023 ರಂದು ಸದರಿ ಮೇಲ್ಮನವಿಯನ್ನು ಪುರಸ್ಕರಿಸಿ ನಮಗೆ ಆದ ಖಾತೆ ಆದೇಶವನ್ನು ವಜಾ ಮಾಡಿರುತ್ತಾರೆಂದರೆ ಸರಿಯಲ್ಲ. ನಾನು ಈ ದಿನ ಹಾಜರುಪಡಿಸಿದ ದಾಖಲೆಗಳು ನಾನು ದಾವಾ ಹೂಡುವ ಸಮಯದಲ್ಲಿಯೇ ನನ್ನ ಬಳಿ ಇದ್ದು ಅವುಗಳನ್ನು ಉದ್ದೇಶಪೂರ್ವಕವಾಗಿ ಇಲ್ಲಿಯವರೆಗೆ ಹಾಜರುಪಡಿಸದೇ ಈಗ ಹಾಜರುಪಡಿಸುತ್ತಿದ್ದೇನೆಂದರೆ ಸರಿಯಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**C/c 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**